**XVII ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಸಣ್ಣ ಕೈಗಾರಿಕೆ ಮತ್ತು ರೇಷ್ಮೆ ಸಚಿವರು) ಅವರ ಪರವಾಗಿ**

**ಶ್ರೀ ಬಿ. ಶ್ರೀರಾಮುಲು (ಪ್ರವಾಸೋದ್ಯಮ ಮತ್ತು ಜವಳಿ ಸಚಿವರು) ಅವರು**

**1956 ರ ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗೆ:**

1. ಅರಣ್ಯ ವಸತಿ ಮತ್ತು ವಿಹಾರ ಧಾಮಗಳ ಸಂಸ್ಥೆ, ಬೆಂಗಳೂರಿನ 2004–05ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
2. ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತದ 2004–05ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಗಳನ್ನು ಮಂಡಿಸುತ್ತೇನೆ.

**ಅಧ್ಯಕ್ಷರು:** ಎಲ್ಲಾ ಕಾಗದ ಪತ್ರಗಳನ್ನು ಮಂಡಿಸಲಾಯಿತು.

**(ಗೊಂದಲ)**

## 4) ವಿತ್ತೀಯ ಕಾರ್ಯಕಲಾಪ

## 2005–06ನೇ ಸಾಲಿನ ಪೂರಕ ಅಂದಾಜುಗಳು (ಎರಡನೆಯ ಕಂತು) (ಮಂಡನೆ ಮತ್ತು ಅಂಗೀಕಾರ)

**ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು):** ಮಾನ್ಯ ಅಧ್ಯಕ್ಷರೆ, 2005–06ನೇ ಸಾಲಿನ ಪೂರಕ ಅಂದಾಜುಗಳನ್ನು (ಎರಡನೆಯ ಕಂತು) ಮಂಡಿಸುತ್ತೇನೆ.

**ಅಧ್ಯಕ್ಷರು:** ಪ್ರಸ್ತಾವವನ್ನು ಮಂಡಿಸಲಾಗಿದೆ.

**(ಗೊಂದಲ)**

**ಅಧ್ಯಕ್ಷರು:** ನಾನು ಈಗ 2005–06ನೇ ಸಾಲಿನ ಪೂರಕ ಅಂದಾಜುಗಳನ್ನು ಸಭೆಯ ಮತಕ್ಕೆ ಹಾಕುತ್ತೇನೆ.

"ಪ್ರಸ್ತಾವ ಏನೆಂದರೆ, 31.03.2006ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಪೂರಕ ಅಂದಾಜುಗಳ ಅಭಿಯಾಚನೆ ಕ್ರಮಾಂಕ 1 ರಿಂದ 5, 7 ರಿಂದ 22, 24 ರಿಂದ 29 ಇವುಗಳಿಗೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ಮತ್ತು ಬಂಡವಾಳ ಖಾತೆಯಲ್ಲಿ ಮಂಜೂರು ಮಾಡುವ ಮೊಬಲಗೂ ಸೇರಿದಂತೆ ಪೂರಕ ಅಂದಾಜುಗಳ ಪಟ್ಟಿಯಲ್ಲಿ ನಮೂದಿಸಿರುವ ಮೊತ್ತಕ್ಕೆ ಮೀರದ ಮೊಬಲಗುಗಳನ್ನು ಮಂಜೂರು ಮಾಡುವುದು".

**ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಪೂರಕ ಅಂದಾಜುಗಳನ್ನು ಮಂಜೂರು ಮಾಡಲಾಯಿತು.**

**(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಪೂರಕ ಅಂದಾಜುಗಳನ್ನು ಈ ಕೆಳಗೆ ನಮೂದಿಸಲಾಗಿದೆ.)**

## ಪೂರಕ ಅಂದಾಜುಗಳು 2005–2006

### (ಎರಡನೆಯ ಕಂತು)

### ಪ್ರಾರಂಭಿಕ ಟಿಪ್ಪಣಿ

ವಿನಿಯೋಗ ಅಧಿನಿಯಮವು ನೀಡಿದ ಅಧಿಕಾರದ ಮೇರೆಗೆ ಪ್ರಸಕ್ತ ವರ್ಷಕ್ಕಾಗಿ ಒಂದು ವಿಶಿಷ್ಟ ಸೇವೆಗೆ ವೆಚ್ಚ ಮಾಡತಕ್ಕ ಮೊಬಲಗು ಆ ವರ್ಷದ ಉದ್ದೇಶಕ್ಕಾಗಿ ಸಾಕಾಗದಿದ್ದರೆ ಅಥವಾ ಆ ವರ್ಷದ ವಾರ್ಷಿಕ ನಿರೂಪಣೆಯಲ್ಲಿ ಹೇಳಿರದ ಹೊಸಸೇವೆಗಾಗಿ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಪೂರಕ ಅಥವಾ ಹೆಚ್ಚಿನ ವೆಚ್ಚದ ಅವಶ್ಯಕತೆಯುಂಟಾಗಿದ್ದರೆ ಅಂದಾಜು ಮಾಡಿದ ವೆಚ್ಚದ ಮೊಬಲಗನ್ನು ತೋರಿಸುವ ಮತ್ತೊಂದು ವಿವರಣೆಯನ್ನು ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸಲು ಸಂವಿಧಾನದ 205(1)ನೆಯ ಅನುಚ್ಛೇದವು ಅವಕಾಶ ಕಲ್ಪಿಸಿದೆ.

ಸಂವಿಧಾನ ಸದರಿ ಉಪಬಂಧಕ್ಕನುಸಾರವಾಗಿ 163882.45 ಲಕ್ಷ ರೂಪಾಯಿಯ ಒಟ್ಟು ಮೊತ್ತದಷ್ಟು ಪೂರಕ ಅಂದಾಜುಗಳನ್ನು ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸಲಾಗಿದೆ. ಈ ಅಂದಾಜುಗಳು ವಿಧಾನಮಂಡಲದ ಮುಂದೆ 2005ರ ಆಗಸ್ಟ್ ತಿಂಗಳಲ್ಲಿ ಮಂಡಿಸಲಾದ 2005–06ನೆಯ ಸಾಲಿನ ಪೂರಕ ಅಂದಾಜುಗಳ ಮೊದಲನೆಯ ಕಂತನ್ನು ಮಂಡಿಸಿದ ತರುವಾಯ ಸಾದಿಲ್ವಾರು ನಿಧಿಯಿಂದ ಮಂಜೂರಾದ ಮುಂಗಡಗಳಿಗೆ ಸಂಬಂಧಿಸಿವೆ.

3. ಸಾದಿಲ್ವಾರು ನಿಧಿಯಿಂದ ಮಂಜೂರಾದ ಮತ್ತು ಅದನ್ನು ಭರಿಸಲು ಪೂರಕ ಅಂದಾಜುಗಳಲ್ಲಿ ಸೇರಿಸಲಾದ ಮುಂಗಡವನ್ನು ತೋರಿಸುವ ವಿವರಣೆಯನ್ನು ಅನುಬಂಧದಲ್ಲಿ ತೋರಿಸಲಾಗಿದೆ.

4. ಪೂರಕ ಅಂದಾಜುಗಳಲ್ಲಿ ಒದಗಿಸಿರುವ 163882.45 ಲಕ್ಷ ರೂ.ಗಳಲ್ಲಿ 48134.04 ಲಕ್ಷ ರೂ.ಗಳು ಕೇಂದ್ರ ಸಹಾಯಕ್ಕೆ ಸಂಬಂಧಿಸಿದೆ, 277.28 ಲಕ್ಷ ರೂ.ಗಳು ಜಮೆಗಳಿಗೆ ಮತ್ತು 381.46 ಲಕ್ಷ ರೂ.ಗಳು ಲೆಕ್ಕ ಹೊಂದಾಣಿಕೆಗೆ ಸಂಬಂಧಿಸಿದೆ. ಸಾಮಾನ್ಯ ರಾಜಸ್ವದಿಂದ ಹೊರಹೋಗುವ ನಿವ್ವಳ ಮೊತ್ತ 115089.67 ಲಕ್ಷ ರೂಪಾಯಿ ಮಾತ್ರವಾಗಿದೆ.

ಪೂರಕ ಅಂದಾಜುಗಳು 2005–2006 (ಎರಡನೇ ಕಂತು)

(ಲಕ್ಷ ರೂ.ಗಳಲ್ಲಿ)

| ಅಭಿಯಾಚನೆ ಸಂಖ್ಯೆ | ಸೇವೆ ಮತ್ತು ಉದ್ದೇಶ | | ಮೊತ್ತ | | |
|---|---|---|---|---|---|
| | | | ಪ್ರಭೃತ | ಪುರಸ್ಕೃತ | ಒಟ್ಟು |
| 01 | ಕೃಷಿ ಮತ್ತು ತೋಟಗಾರಿಕೆ | ರಾಜಸ್ವ | 0.00 | 1308.36 | 1308.36 |
| 02 | ಪಶುಸಂಗೋಪನೆ ಮತ್ತು ಮೀನುಗಾರಿಕೆ | ರಾಜಸ್ವ | 0.00 | 312.61 | 312.61 |
| 03 | ಆರ್ಥಿಕ | ರಾಜಸ್ವ | 0.00 | 1036.50 | 1036.50 |
| | | ಬಂಡವಾಳ | 0.00 | 25.00 | 25.00 |
| 04 | ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ | ರಾಜಸ್ವ | 475.50 | 469.04 | 944.54 |

(ಲಕ್ಷ ರೂ.ಗಳಲ್ಲಿ)

| ಅಭಿಯಾಚನೆ ಸಂಖ್ಯೆ | ಸೇವೆ ಮತ್ತು ಉದ್ದೇಶ | | ಮೊತ್ತ | | |
|---|---|---|---|---|---|
| | | | ಪ್ರಭೃತ | ಪುರಸ್ಕೃತ | ಒಟ್ಟು |
| 05 | ಒಳಾಡಳಿತ ಮತ್ತು ಸಾರಿಗೆ | ರಾಜಸ್ವ | 0.00 | 1683.85 | 1683.85 |
| 07 | ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತಿ ರಾಜ್ | ಬಂಡವಾಳ | 0.00 | 23576.00 | 23576.00 |
| 08 | ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ | ರಾಜಸ್ವ | 0.46 | 363.34 | 363.80 |
| 09 | ಸಹಕಾರ | ರಾಜಸ್ವ | 0.00 | 55.00 | 55.00 |
| | | ಬಂಡವಾಳ | 0.00 | 980.50 | 980.50 |
| 10 | ಸಮಾಜ ಕಲ್ಯಾಣ | ರಾಜಸ್ವ | 0.00 | 651.55 | 651.55 |
| 11 | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ | ರಾಜಸ್ವ | 0.00 | 516.45 | 516.45 |
| 12 | ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳು | ರಾಜಸ್ವ | 0.00 | 285.50 | 285.50 |
| 13 | ಆಹಾರ ಮತ್ತು ನಾಗರೀಕ ಸರಬರಾಜು | ರಾಜಸ್ವ | 0.00 | 18002.00 | 18002.00 |
| 14 | ಕಂದಾಯ | ರಾಜಸ್ವ | 0.00 | 49554.00 | 49554.00 |
| 15 | ಮಾಹಿತಿ ತಂತ್ರಜ್ಞಾನ | ರಾಜಸ್ವ | 0.00 | 318.00 | 318.00 |
| | | ಬಂಡವಾಳ | 0.00 | 610.00 | 610.00 |
| 16 | ವಸತಿ | ರಾಜಸ್ವ | 0.00 | 6025.78 | 6025.78 |
| | | ಬಂಡವಾಳ | 0.00 | 4640.00 | 4640.00 |
| 17 | ಶಿಕ್ಷಣ | ರಾಜಸ್ವ | 0.00 | 2241.16 | 2241.16 |
| 18 | ವಾಣಿಜ್ಯ ಮತ್ತು ಕೈಗಾರಿಕಾ | ರಾಜಸ್ವ | 0.00 | 236.76 | 236.76 |
| | | ಬಂಡವಾಳ | 0.00 | 2821.69 | 2821.69 |
| 19 | ನಗರಾಭಿವೃದ್ಧಿ | ರಾಜಸ್ವ | 0.00 | 100.00 | 100.00 |
| 20 | ಲೋಕೋಪಯೋಗಿ | ರಾಜಸ್ವ | 0.00 | 20512.92 | 20512.92 |
| | | ಬಂಡವಾಳ | 0.00 | 5103.72 | 5103.72 |
| 21 | ಜಲ ಸಂಪನ್ಮೂಲ | ರಾಜಸ್ವ | 0.00 | 371.56 | 371.56 |
| | | ಬಂಡವಾಳ | 0.00 | 6550.00 | 6550.00 |
| 22 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು | ರಾಜಸ್ವ | 0.00 | 2751.82 | 2751.82 |
| 24 | ಇಂಧನ | ಬಂಡವಾಳ | 0.00 | 5000.00 | 5000.00 |

(ಲಕ್ಷ ರೂ.ಗಳಲ್ಲಿ)

| ಅಭಿಯಾಚನೆ ಸಂಖ್ಯೆ | ಸೇವೆ ಮತ್ತು ಉದ್ದೇಶ | | ಮೊತ್ತ | | |
|---|---|---|---|---|---|
| | | | ಪ್ರಭೃತ | ಪುರಸ್ಕೃತ | ಒಟ್ಟು |
| 25 | ಕನ್ನಡ ಮತ್ತು ಸಂಸ್ಕೃತಿ | ರಾಜಸ್ವ | 0.00 | 151.70 | 151.70 |
| 26 | ಯೋಜನೆ, ಸಾಂಖ್ಯಿಕ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ | ರಾಜಸ್ವ | 0.00 | 188.40 | 188.40 |
| 27 | ಕಾನೂನು | ರಾಜಸ್ವ | 50.00 | 40.74 | 90.74 |
| 28 | ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ | ರಾಜಸ್ವ | 12.94 | 1166.66 | 1179.60 |
| 29 | ಋಣ ಮೇಲುಸ್ತುವಾರಿ | ರಾಜಸ್ವ | 39.46 | 0.00 | 39.46 |
| | | ಬಂಡವಾಳ | 5653.48 | 0.00 | 5653.48 |
| | ಜುಮ್ಲಾ | ರಾಜಸ್ವ | 578.36 | 108343.70 | 108922.06 |
| | | ಬಂಡವಾಳ | 5653.48 | 49306.91 | 54960.39 |
| | ಒಟ್ಟು ಜುಮ್ಲಾ | | 6231.84 | 157650.61 | 163882.45 |

(ಗೊಂದಲ)

**ಅಧ್ಯಕ್ಷರು:** ಈಗ ಸದನವನ್ನು ಮಧ್ಯಾಹ್ನ ಮೂರು ಗಂಟೆಯವರೆಗೆ ಮುಂದೂಡಲಾಗಿದೆ.

**(ಸಭೆಯು 12 ಗಂಟೆ 56 ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ ಮಧ್ಯಾಹ್ನ 3-00 ಗಂಟೆಗೆ ಸೇರಲು ನಿಶ್ಚಯಿಸಿತು)**

**ಸದನವು ಮಧ್ಯಾಹ್ನ 3-13 ಗಂಟೆಗೆ ಸಮಾವೇಶಗೊಂಡಿತು.**

**ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನಲಂಕರಿಸಿದರು.**

**ಅಧ್ಯಕ್ಷರು:** ಈಗ, ಮಾನ್ಯ ಉಪ ಮುಖ್ಯಮಂತ್ರಿಗಳು ವಿಧೇಯಕವನ್ನು ಮಂಡಿಸಬೇಕು.

## 5) ಶಾಸನ ರಚನೆ (ವಿಧೇಯಕದ ಮಂಡನೆ, ಚರ್ಚೆ ಮತ್ತು ಅಂಗೀಕಾರ)

### ಕರ್ನಾಟಕ ಧನವಿನಿಯೋಗ ವಿಧೇಯಕ, 2006

### ಮಂಡನೆಗೆ ಅನುಮತಿ ಕೋರಿಕೆ

**ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು):** ಮಾನ್ಯ ಅಧ್ಯಕ್ಷರೆ,

"2006ರ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ".

**ಅಧ್ಯಕ್ಷರು:** ಪ್ರಸ್ತಾವ ಏನೆಂದರೆ,

"2006ರ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"